ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಬದಲಿ ರಸ್ತೆ ಮಾಡುವ ಪ್ರಸ್ತಾವನೆ ಸದ್ಯದಲ್ಲಿ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಕಾರ್ಮಿಕ ಕಲ್ಯಾಣ ಮಂಡಳಿಯಿಂದ ನೀಡಿರುವ ವಿದ್ಯಾರ್ಥಿ ವೇತನಗಳು

998 - ಶ್ರೀ ಎಸ್. ಅಂಗಾರ (ಸುಳ್ಯ) : ಮಾನ್ಯ ಉಪ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಕಾರ್ಮಿಕ ಕಲ್ಯಾಣ ಮಂಡಳಿಯಿಂದ 1994-96ರ ವರೆಗೆ ಎಷ್ಟು ಕಾರ್ಮಿಕ ಮಕ್ಕಳಿಗೆ ವಿದ್ಯಾರ್ಥಿ ವೇತನ ಒದಗಿಸಿಕೊಡಲಾಗಿದೆ? (ತಲಾ ವರ್ಷಾವಾರು ವಿವರ ನೀಡುವುದು).

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಯವರು) :

ಅ) 1994-95ವರೆಗೆ ಈ ಕೆಳಗೆ ತಿಳಿಸಿರುವಂತೆ ವರ್ಷಾವಾರು ಕಾರ್ಮಿಕರ ಮಕ್ಕಳಿಗೆ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯಿಂದ ವಿದ್ಯಾರ್ಥಿವೇತನ ನೀಡಲಾಗಿದೆ.

ವರ್ಷ	ವಿದ್ಯಾರ್ಥಿ ವೇತನ ಪಡೆದ ವಿದ್ಯಾರ್ಥಿಗಳ ಸಂಖ್ಯೆ	ಒಟ್ಟು ವಿದ್ಯಾರ್ಥಿ ವೇತನ (ಬಟವಾಡೆ ಮೊತ್ತ)
1994-95	2,384	12,00,000-00
1995-96	2,789	14,88,080-00
ಒಟ್ಟು	**5,5173**	**26,88,080-00**

ಸುಳ್ಯ ವಿಧಾನ ಸಭಾಕ್ಷೇತ್ರದ ಲೋಕೋಪಯೋಗಿ ಇಲಾಖೆ ರಸ್ತೆಗಳ ನಿರ್ವಹಣೆಯಲ್ಲಿ ಗ್ಯಾಂಗಮನಗಳ ಕೊರತೆ

999 - ಶ್ರೀ ಎಸ್. ಅಂಗಾರ (ಸುಳ್ಯ ಕ್ಷೇತ್ರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಸುಳ್ಯ ವಿಧಾನ ಸಭಾ ಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆಯ ರಸ್ತೆಗಳ ನಿರ್ವಹಣೆಗಾಗಿ ಗ್ಯಾಂಗ್‌ಮನ್‌ಗಳಿಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಹಾಗಿದ್ದಲ್ಲಿ ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

1) ಈ ವಿಧಾನ ಸಭಾ ಕ್ಷೇತ್ರದಡಿಯಲ್ಲಿ 65.20 ಕಿ.ಮೀ ರಾಜ್ಯ ಹೆದ್ದಾರಿ ಹಾಗೂ 200 ಕಿ.ಮೀ ಜಿಲ್ಲಾ ಮುಖ್ಯ ರಸ್ತೆಯಿದ್ದು ಇವುಗಳ ನಿರ್ವಹಣೆಗೆ56 ಗ್ಯಾಂಗ್‌ಮನ್‌ಗಳಿರಬೇಕಾಗಿದ್ದ, ಪ್ರಸ್ತುತ 21 ಮಂದಿ ಗ್ಯಾಂಗ್‌ಮನ್‌ಗಳಿರುತ್ತಾರೆ.